ದಿಃ 06-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲು ಶ್ರೀ. ಐ.ಎನ್.ಎನ್. ವಾದಿ ಪರ ವಕೀಲರಿಂದಃ</u>

ನನ್ನ ಪ್ರಮಾಣ ಪತ್ರವನ್ನು ತಯಾರು ಮಾಡಲು ಮಾಹಿತಿಯನ್ನು ಯಾರು ನೀಡಿದ್ದರು ಎಂದರೆ ನಾನೇ. ಅದರಲ್ಲಿ ಬರೆದಿರುವ ಅಂಶಗಳು ಸತ್ಯವಾಗಿದೆ. ನಿಡಿ-18 ಅನ್ನು ತೋರಿಸಲಾಗಿ, ಯಾವ ವಿಚಾರವಾಗಿ ನೀಡಿದ್ದರು ಎಂದರೆ ಪ್ರತಿವಾದಿ ನಂ.2 ರವರ ಹೆಸರಿನಲ್ಲಿ ಪಹಣಿ ಇದ್ದು, ಅದರ ವಿಚಾರವಾಗಿ ನಿಡಿ-18 ಅನ್ನು ನೀಡಿರುತ್ತಾರೆ. ನಿಡಿ-17 ಅನ್ನು ಯಾವ ವಿಚಾರವಾಗಿ ನೀಡಿದ್ದರು ಎಂದರೆ ಪ್ರತಿವಾದಿ ನಂ.2 ರವರ ಹೆಸರಿನಲ್ಲಿ ಯಾವುದೇ ದಾಖಲಾತಿಯ ಇಲ್ಲ ಎಂದು ಹಿಂಬರಹವನ್ನು ನೀಡಿರುತ್ತಾರೆ. ನಿಡಿ-17 ರಲ್ಲಿ ಯಾವ ಸ.ನಂ. ನಮೂದಾಗಿದೆ ಎಂದರೆ ಸ.ನಂ. 49/4 ಎಂದು ನುಡಿಯುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಪ್ಯಾರ ನಂ. 2 ರಲ್ಲಿ ನಮೂದು ಮಾಡಿರುವ ಹಾಗೇ ಸ.ನಂ. 49/4 ಮೂಲತಃ ಹುಸೇನ್ ಸಾಬ್ ಗೆ ಸೇರಿದ್ದು ಎಂದು ಯಾವ ಆಧಾರದ ಮೇಲೆ ಬರೆಯಿಸಿದ್ದೀರಿ ಎಂದರೆ ಸಾಕ್ಷಿಯು ಪಹಣಿ, ಪಟ್ಟಾ ಪುಸ್ತಕ, ನನ್ನ ತಂದೆಯವರು ಸಾಲವನ್ನು ಮಾಡಿದ್ದರು ಅದರ ಆಧಾರದ ಮೇಲೆ ಬರೆಯಿಸಿರುತ್ತೇನೆ ಎಂದು ನುಡಿಯುತ್ತಾರೆ. ದಾವೆ ಹೂಡುವ ಸಮಯದಲ್ಲಿ ನನ್ನ ತಂದೆ ಬದುಕಿದ್ದರು ಎಂದರೆ ಸರಿ. ನನ್ನ ತಂದೆಯ ತಂದೆ ಹೆಸರು ರಾಜಾ ಸಾಬ್. ಪಹಣಿಯಲ್ಲಿ ಯಾರ ಹೆಸರು ನಮೂದು ಇದೆ ಎಂದರೆ ರಾಜಾ ಸಾಬ್ ಹೆಸರು ನಮೂದು ಇದೆ. ನಿಡಿ-14 ರಲ್ಲಿ ಯಾರ ಹೆಸರು ನಮೂದು ಇದೆ ಎಂದರೆ ಹುಸೇನ್ ಸಾಬ್ ಹಾಗೂ ಇಮಾಮ್ ಸಾಬ್ ಹೆಸರು ನಮೂದು ಇದೆ. ನಿಡಿ-16 ರಲ್ಲಿ ಇಮಾಮ್ ಸಾಬ್, ರಾಜಾ ಸಾಬ್, ಮುಸ್ತಾನ್ ಸಾಬ್ ಹೆಸರುಗಳು ನಮೂದು ಇದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ಯಾರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಪ್ರತಿವಾದಿ ನಂ. 2 ರವರು ಇದ್ದಾರೆ. ನನ್ನ ತಾತ ಪ್ರತಿವಾದಿ ನಂ. 2 ರವರಿಗೆ ಮಾರಾಟ ಮಾಡಿದ್ದಾರಾ ಎಂದರೆ ಇಲ್ಲ. ವಾದಿ ನಂ. 1 ರಿಂದ 7 ಜೀವಂತವಾಗಿ ಇದ್ದಾರೆ ಎಂದರೆ ವಾದಿ ನಂ. 2 ಮತ್ತು 5 ಜೀವಂತವಾಗಿ ಇಲ್ಲ ಎಂದು ನುಡಿಯುತ್ತಾರೆ. ಹುಸೇನ್ ಸಾಬ್ ತೀರಿಕೊಂಡ ನಂತರ ಅವರ ಮಕ್ಕಳು ಸ್ವಾಧೀನದಲ್ಲಿ ಇದ್ದರು ಎಂದು ಯಾವ ಆಧಾರದ ಮೇಲೆ ಪ್ರಮಾಣ ಪತ್ರದಲ್ಲಿ ನಮೂದಾಗಿದೆ ಎಂದರೆ ನನ್ನ ತಂದೆಯವರು ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದರು ಆ ಆಧಾರದ ಮೇಲೆ ಬರೆಯಿಸಿರುತ್ತೇನೆ. ಪ್ರತಿವಾದಿ ನಂ. 2 ರವರು

ಜಮೀನಿಗೆ ಅಡ್ಡಪಡಿಸಿರುವ ವಿಚಾರವಾಗಿ ದೂರನ್ನು ನೀಡಿದ್ದೀರಾ ಎಂದರೆ ನಾನು ಅವಾಗ ಚಿಕ್ಕವನಿದೆ ಎಂದು ನುಡಿಯುತ್ತಾರೆ.

**(**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.**)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಹೆ.ಸಿ.ನ್ಯಾಮತ್ತು ಜೆಎಂಎಫ್‌ಸಿ,

ಗೌರಿಬಿದನೂರು